



# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೩೩

ಅಪೂರ್ವಾನಂದರು ಕೈಲಾಸಯಾತ್ರೆಗೆ ಹೊರಟು ಹೋದರು. ಹಿಂತಿರುಗಲು ಮೂರು ತಿಂಗಳಾದರೂ ಬೇಕು. ಅನಂತಾನಂದರಿಗೆ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಮಠಾಧ್ಯಕ್ಷರನ್ನು ನೋಡಿಕೊಳ್ಳುವುದಲ್ಲದೆ ಆಶ್ರಮದ ತೋಟ, ಗೋಶಾಲೆ, ಉಗ್ರಾಣ ಮುಂತಾದವುಗಳನ್ನೂ ಸಹ ನೋಡಿಕೊಳ್ಳಬೇಕಾಗಿ ಬಂತು. ವಿರಜಾನಂದರು ನಕ್ಕು ಹೇಳಿದರು, ''ಎಂಥ ಕಷ್ಟದಲ್ಲಿ ಸಿಲುಕಿದೆ, ಕಾನ್ಹಾಯ್!'' ಅದಕ್ಕವರು ಹೀಗೆ ಉತ್ತರಿಸಿದರು, ''ಇಲ್ಲ ಮಹಾರಾಜ್ ನನ್ನಿಂದ ಸಾಧ್ಯವಿಲ್ಲ. ಈ ವಯಸ್ಸಿನಲ್ಲಿ ಇಷ್ಟೆಲ್ಲ ಆಗದು. ನಾನು ಹೊರಟುಹೋಗುತ್ತೇನೆ.'' ಆಗ ವಿರಜಾನಂದರು ಮರುಉತ್ತರ ಕೊಟ್ಟರು, ''ಹ್ಞಾ, ಅದು ತಿಳಿದೇ ಇದೆ. ಏಕೆಂದರೆ ನಿನ್ನ ಕಾಲಲ್ಲಿ ಚಕ್ರವಿದೆಯಲ್ಲ! ಆದರೆ ಸ್ವಲ್ಪದಿನ ಇದ್ದು ಹೋಗು. ಆಶ್ರಮವಾಸಿಗಳೊಬ್ಬರು ಇಲ್ಲಿಗೆ ಬರುವ ಮಾತಿದೆ. ಅವರು ಬಂದ ಮೇಲೆ ನೀನು ಹೋಗುವೆಯಂತೆ.''

**ಕಾನ್ಹಾಯ್:** ಹಾಗಾದರೆ ಮಹಾರಾಜ್, ಬರುತ್ತಿರುವವರಿಗೊಂದು ಪತ್ರಬರೆದು, ಇನ್ನು ತಡ ಮಾಡದೆ ಬೇಗ ಬರಲು ತಿಳಿಸಿ.

**ವಿರಜಾನಂದರು:** ಅರೇ ಸ್ವಲ್ಪ ತಾಳು. ಅವನು ಯಾವುದೋ ಕೆಲಸದ ನಿಮಿತ್ತ ಉಳಿದಿದ್ದಾನೆ. ಅದನ್ನು ಮುಗಿಸಿ ಬರಬೇಕಲ್ಲವೆ?

ಕಾನ್ಹಾಯ್ ಮತ್ತಿನ್ನೇನೂ ಹೇಳಲಿಲ್ಲ. ತಮ್ಮಷ್ಟಕ್ಕೆ ತಾವೇ ಏನೋ ಗೊಣಗಿಕೊಂಡು ಹೊರಟುಹೋದರು. ವಿರಜಾನಂದರು ಮತ್ತೆ ಲೆಕ್ಕ-ಪತ್ರದ ಕಡೆ ತಮ್ಮ ಗಮನ ಹರಿಸಿದರು.

ಮುಂಬೈಯಿಂದ ಸ್ವಾಮಿ ಸಂಬುದ್ಧಾನಂದರು ಮನವಿಯೊಂದನ್ನು ವಿರಜಾನಂದರಿಗೆ ಕಳುಹಿಸಿದರು, ''ಮಹಾರಾಜ್ ನೀವು ಮಠದಲ್ಲಿದ್ದಾಗ ಹೇಳಿದ್ದಿರಿ, ಶ್ಯಾಮಲಾತಾಲ್‌ನಲ್ಲಿ ಕೆಲವು ತಿಂಗಳು ವಿಶ್ರಾಂತಿ ಪಡೆದು ಮುಂಬೈಗೆ ಬರಲು ಪ್ರಯತ್ನಿಸುವೆ ಎಂದು. ನಮ್ಮ ಪ್ರಾರ್ಥನೆಯನ್ನು ಪುನಃ ನಿಮ್ಮ ಸ್ಮರಣೆಗೆ ತರುತ್ತಿರುವೆ. ತಾವು ಕೆಲವು ವಾರಗಳಿಗೋಸ್ಕರ ಇಲ್ಲಿಗೆ ದಯಮಾಡಿಸಿ ನಮ್ಮೆಲ್ಲರಿಗೂ ಆನಂದ ನೀಡಬೇಕು'' ಎಂದು. ಅವರು ಇತ್ತೀಚೆಗೆ ಕೈಗೊಂಡ ಚೆನ್ನೈ ಪ್ರವಾಸದಿಂದ, ರಾಮಕೃಷ್ಣ-ವಿವೇಕಾನಂದರ ವಿಚಾರ ಧಾರೆಯ ಅರಿವಿಗಾಗಿ ಮತ್ತು ಅವರಿಂದ ನಿರ್ದೇಶಿತವಾದ ಸಾಧನ ಮಾರ್ಗದಲ್ಲಿ ನಡೆದು, ಆಧ್ಯಾತ್ಮಿಕ ಜೀವನವನ್ನು ರೂಪಿಸಿಕೊಳ್ಳಲು ದೂರದೂರದಲ್ಲಿರುವ ಸಮಾಜದ ನಾನಾ ಸ್ತರದಲ್ಲಿರುವ ನೂರಾರು ಜನರು ಅದೆಷ್ಟೊಂದು ವ್ಯಾಕುಲಚಿತ್ತರಾಗಿದ್ದಾರೆ! ಎಂಬುದು ವಿರಜಾನಂದರಿಗೆ ಗೋಚರವಾಗಿತ್ತು. ಮಠಾಧ್ಯಕ್ಷರ ಆಗಮನ ಮತ್ತು ಸನ್ನಿಧಿಯು ಭಕ್ತರ ಹೃದಯಕ್ಕೆ ಉತ್ಸಾಹ-ಪ್ರೇರಣೆಯನ್ನು ತರುವುವು. ಶ್ರೀರಾಮಕೃಷ್ಣರು ಅಶರೀರಿಯಾಗಿ ಈ ಸಹಸ್ರಾರು ಜಿಜ್ಞಾಸುಗಳ ಹೃದಯದಲ್ಲಿ ವಾಸಿಸಲಿಚ್ಛಿಸುತ್ತಿದ್ದಾರೆ. ಇದೇ ಅಲ್ಲವೆ ಅವರ ಅವತಾರದ ಉದ್ದೇಶ. ಈ ಮಹದುದ್ದೇಶದಲ್ಲಿ ಸಹಾಯಕರಾಗುವುದು ಅದೆಂತಹ ಸೌಭಾಗ್ಯ! ಆತ ಯಂತ್ರ ಚಾಲಕ, ನಾವೆಲ್ಲ ಅವನ ಯಂತ್ರಗಳು. ಈ ದೃಷ್ಟಿಯನ್ನಿಟ್ಟುಕೊಂಡೆ ಅಲ್ಲವೆ ಸಂಘದ ಹಿಂದಿನ ಆಚಾರ್ಯರೆಲ್ಲ ತಮ್ಮ ಪ್ರಾಣವನ್ನು ಒತ್ತೆಯಾಗಿಟ್ಟು ದುಡಿದದ್ದು? ಈಗ ಅವರುಗಳು ಇಲ್ಲವಾದರೂ ಅವರ ಆದರ್ಶವು ಅಚ್ಚಳಿಯದೇ ಉಳಿದುಕೊಂಡಿದೆ. ಹೊಸ ಹೊಸ ಪಾತ್ರವನ್ನಾರಿಸಿಕೊಂಡು ಈ ವಿಚಾರಧಾರೆಯು ವ್ಯಕ್ತವಾಗುತ್ತಿರುತ್ತದೆ. ಶ್ರೀರಾಮಕೃಷ್ಣರ ಇಚ್ಛೆಯಿಂದ ವಿರಜಾನಂದರು ಈಗ ಅದಕ್ಕೆ ಪಾತ್ರರಾಗಿದ್ದಾರೆ. ಈ ಸೌಭಾಗ್ಯದ ಮೌಲ್ಯವನ್ನು ವಿರಜಾನಂದರು ಅರಿತುಕೊಂಡಿದ್ದಾರೆ. ಹಾಗಾಗಿ ಸಂಬುದ್ಧಾನಂದರಿಗೆ 'ಹ್ಞಾ, ಬರುವೆ' ಎಂದು ಜವಾಬು ಬರೆದರು.

ಈಗ ಅನಂತಾನಂದರ ಬದಲಿ ಸೇವಕರು ಶ್ಯಾಮಲಾತಾಲನ್ನು ತಲುಪಿದ್ದಾರೆ. ಪರ್ವತಹಾದಿಯ ಅಭ್ಯಾಸವಿಲ್ಲದವರು ಕಷ್ಟಪಟ್ಟು ಹತ್ತಿ ಇಳಿದು, ಸುಸ್ತಾಗಿ ಆಶ್ರಮದ ಆವರಣಕ್ಕೆ ಬಂದಾಗ ಚೆನ್ನಾಗಿಯೇ ರಾತ್ರಿಯಾಗಿತ್ತು. ಮಳೆಗಾಲದ ಕೃಷ್ಣಪಕ್ಷ ಬೇರೆ. ವಿರಜಾನಂದರು ಲಾಟೀನು ಹಿಡಿದು ಆತನಿಗೆ ದಾರಿತೋರುತ್ತ ಆಶ್ರಮದೊಳಕ್ಕೆ ಕರೆತಂದರು. ''ಬಂದ್ಯೇನಪ್ಪ! ಬದುಕಿಸಿದೆ'' ಎನ್ನುತ್ತ ಪಿತೃವಾತ್ಸಲ್ಯವನ್ನೇ ಹರಿಸಿದರು. ಆದರೆ ಅನಂತಾನಂದರು ಮಾತ್ರ ದುರುಗುಟ್ಟಿ ನೋಡುತ್ತಿದ್ದರು. 'ಬರಲು ಇಷ್ಟು ತಡವೇಕೆ? ನನಗಾದರೋ ಪ್ರಾಣವೇ ಹೋಗುತ್ತಿದೆ' ಎಂಬಂತೆ. ವಿರಜಾನಂದರು ಛೇಡಿಸುತ್ತ ಕೇಳಿದರು ''ಇನ್ನು ಕಾನ್ಹಾಯನ್ನು ಹಿಡಿದಿಡಲಾದೀತೆ? ಏನು ನಾಳೆ ಬೆಳಿಗ್ಗೆಯೇ ಹೊರಟುಬಿಡುವೆಯೋ ಹೇಗೆ?'' ಕಾನ್ಹಾಯ್ : ''ಸಾಧ್ಯವಿದ್ದಿದ್ದರೆ ಇಂದು

ರಾತ್ರಿಯೇ ಹೊರಟುಬಿಡುತ್ತಿದ್ದೆ ಮಹಾರಾಜ್'' ಎಂದಾಗ ನಗು ವಿನ ಹೊನಲು ಹರಿಯಿತು. ಇಷ್ಟರಲ್ಲಿ , ಬಂದ ಸಾಧುವಿಗೆ ವಿರಜಾನಂದರು ಚಹಾ, ತಿಂಡಿಯ ವ್ಯವಸ್ಥೆಯನ್ನು ಮಾಡಿದರು. ಆ ಸಾಧುವು ಚಹಾ ಕುಡಿಯುತ್ತಿದ್ದಂತೆ ತಮಗಾಗಿ ಸ್ವತಃ ವಿರಜಾ ನಂದರೇ ಹಾಸಿಗೆ ಮಾಡಲು ಅನುವಾದದ್ದನ್ನು ಕಂಡು ಹೌಹಾರಿ, ಅವರ ಕೈಯಿಂದ ಕಸಿದುಕೊಳ್ಳಲು ಹೋದರು. ಅದಕ್ಕೆ ವಿರಜಾ ನಂದರು ''ಅದರಲ್ಲೇನಿದೆ? ನೀನು ತುಂಬ ಸುಸ್ತಾಗಿ ಬಂದಿ ರುವೆ'' ಎಂದರು.

ಕೆಲವು ದಿನಗಳ ನಂತರ ಅನಂತಾನಂದರು ಹೊಸದಾಗಿ ಬಂದ ಸಾಧುವಿಗೆ ಅಲ್ಲಿಯ ಕೆಲಸಗಳನ್ನೆಲ್ಲ ವಹಿಸಿ, ಟನಕಪುರಕ್ಕೆ ಹೊರಟರು. ಮಹಾರಾಜರು ''ಕಾನ್ಹಾಯ್ ನೀನೀಗ ಎಲ್ಲಿಗೆ ಹೋಗುವೆ?'' ಎಂದು ಕೇಳಿದರು. ಆಗ ಅವರು ಕೇವಲ ''ನೋಡೋಣ'' ಎಂದಷ್ಟೇ ಹೇಳಿದರು.

ಮಾಯಾವತಿಯ ಅದ್ವೈತ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಪವಿತ್ರಾನಂದರಿಂದ ಪತ್ರವೊಂದು ಬಂದಿತ್ತು, ''ನೀವು ಮಾಯಾ ವತಿಗೆ ಬಂದು ಅನೇಕ ದಿನಗಳಾಯಿತು, ದಯವಿಟ್ಟು ಈಗ ಬನ್ನಿ. ಇಲ್ಲಿ ನಿಮ್ಮ ವಿಶ್ರಾಂತಿಗಾಗಿ ಎಲ್ಲ ರೀತಿಯ ಏರ್ಪಾಡು ಮಾಡುತ್ತೇವೆ'' ಎಂದು. ಈ ಆಹ್ವಾನವನ್ನು ತಳ್ಳಿಹಾಕುವುದು ಕಠಿಣ. ಏಕೆಂದರೆ ಮಾಯಾವತಿಯ ಆಶ್ರಮದೊಂದಿಗೆ ಜೀವ ನದ ಅನೇಕ ಅಧ್ಯಾಯಗಳು ದಟ್ಟವಾಗಿ ಹೆಣೆದುಕೊಂಡಿವೆ. ಅವುಗಳು ಆಗಾಗ ನೆನಪಿನ ಸುಳಿಯಿಂದ ಮೇಲೆದ್ದು ಜೀವ ತಳೆದು, 'ಬಾ ಬಾ, ನಾವಿನ್ನೂ ಮೃತರಾಗಿಲ್ಲ , ಕಳೆದುಹೋದ ಆಸೆ-ಪ್ರತೀಕ್ಷೆ, ನೋವು-ನಲಿವುಗಳ ಮಧ್ಯೆ ನಾವು ಶಾಶ್ವತ ವಾಗಿಯೇ ಇದ್ದೇವೆ. ಬಾ, ಬಂದು ನೋಡಿಹೋಗು. ಜೀವನದ ಸಂಧ್ಯೆಯಲ್ಲಿ ನಮ್ಮ ಕೊನೆಯ ಆಶೀರ್ವಾದವನ್ನು ಪಡೆದು ಹೋಗು' ಎಂದು ಕೈಬೀಸಿ ಕರೆಯುತ್ತಿದ್ದವು. ವಿರಜಾನಂದರು ಹೋಗಲು ನಿರ್ಧರಿಸಿ ಮಾಯಾವತಿಗೆ ಹೀಗೆಂದು ಪತ್ರ ಬರೆದು ಕಳುಹಿಸಿದರು, ''ದುರ್ಗಾಪೂಜೆಗೆ ಮೊದಲೇ ಬರುತ್ತಿರುವೆ'' ಎಂದು.

ಇತ್ತ ಆಲ್ಮೋರದಿಂದಲೂ ವಿರಜಾನಂದರ ಪ್ರೀತಿಪಾತ್ರರಾದ ವಶೀಶ್ವರ ಸೇನ್ (ಬೋಶಿ ಸೇನ್) ನಿಂದ ಪ್ರೀತಿಯ ತಗಾದೆ ''ಕೆಲದಿನಗಳು ನಿಮ್ಮನ್ನು ನಮ್ಮಲ್ಲಿರಿಸಿಕೊಂಡು ಸೇವೆ ಮಾಡಲಿಚ್ಛೆ. ನೀವು ಬರಲೇಬೇಕು'' ಎಂದು. ಈ ಬೋಶಿ ಬಾಬುಗಳು ಶ್ರೀಮಾತೆಯವರ, ಬ್ರಹ್ಮಾನಂದರ ಮತ್ತು ಶ್ರೀರಾಮಕೃಷ್ಣರ ಇತರ ಲೀಲಾ ಸಹಚರರ ಕೃಪೆಯನ್ನು ಪಡೆದಿದ್ದರು. ಸೋದರಿ ನಿವೇದಿತಾಳಿಗೆ ಮತ್ತು ಸ್ವಾಮಿ ವಿವೇಕಾನಂದರ ಶಿಷ್ಯರಲ್ಲೊಬ್ಬ ರಾದ ಸ್ವಾಮಿ ಸದಾನಂದರಿಗೆ ಇವರು ಅತ್ಯಂತ ಪ್ರೀತಿಪಾತ್ರರು. ಅವರನ್ನು ಬೋಶಿಯು ತಂದೆಯಂತೆ ಕಾಣುತ್ತಿದ್ದರು ಮತ್ತು ಅವರ ಕಡೆಗಾಲದಲ್ಲಿ ಬಹಳ ಸೇವೆಗೈದಿದ್ದರು. ಸದಾನಂದರು ವಿರಜಾನಂದರಿಗೆ ಹಿರಿಯಣ್ಣನ ಸಮಾನ. ಇದನ್ನು ಮನಸ್ಸಿನ ಲ್ಲಿರಿಸಿಕೊಂಡು ಬೋಶಿಯು ವಿರಜಾನಂದರನ್ನು 'ಚಾಚಾ' ಎಂದೇ ಸಂಬೋಧಿಸುತ್ತಿದ್ದರು. ಬೋಶಿ ಬಾಬುಗಳು ಸಸ್ಯ ಶಾಸ್ತ್ರಜ್ಞರು. ಇವರು ಯುವಕರಾಗಿದ್ದಾಗ ಡಾ. ಜಗದೀಶ್ ಚಂದ್ರ ಬೋಸರ ಜೊತೆಗೆ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದರು. ಈಗ ತಮ್ಮದೇ ಆದ ಪ್ರಯೋಗಾಲಯವನ್ನು (ವಿವೇಕಾನಂದ ಲ್ಯಾಬೋರೇಟರಿ) ಸ್ಥಾಪಿಸಿ, ಸಂಶೋಧನೆಯಲ್ಲಿ ನಿರತರಾಗಿ ದ್ದರು. ಅಮೇರಿಕಾ ಹಾಗೂ ಯುರೋಪು ದೇಶಗಳಿಗೆ ಹಲವು ಬಾರಿ ಪ್ರಯಾಣಿಸಿದ್ದರು. ಗರ್ಟ್ರೂಡ್ ಎಮರ್ಸನ್ ಎಂಬ ಪ್ರಖ್ಯಾತ ಅಮೇರಿಕನ್ ಲೇಖಕಿಯು ಈತನ ಪತ್ನಿ. ಈಗ ಈಕೆಯ ಹೆಸರು ಗರ್ಟ್ರೂಡ್ ಸೇನ್. ವಿರಜಾನಂದರು ಗರ್ಟ್ರೂಡಳನ್ನು 'ಸೊಸೆ' ಎಂದು ಕರೆಯುತ್ತಿದ್ದರು. ಈ ಸೊಸೆಯೂ ಕೂಡ ಬೋಶಿ ಯವರೊಂದಿಗೆ ತಮ್ಮ ಆಹ್ವಾನವನ್ನು ಕಳುಹಿಸಿದ್ದರು. ''Uncle, you must come''('ಚಿಕ್ಕಪ್ಪ ನೀವು ಬರಲೇ ಬೇಕು') ಎಂದು.

ಈಗ ಆಗಸ್ಟ್ ತಿಂಗಳು. ಮಳೆಯು ಕಡಿಮೆಯಾಗುತ್ತ ಬರು ತ್ತಿದೆ. ಆಶ್ರಮದ ವಿಶಾಲವಾದ ಪುಷ್ಪೋದ್ಯಾನದಲ್ಲಿ ಚಿತ್ರವಿಚಿತ್ರ ಬಣ್ಣಗಳ ಸಮಾವೇಶ. ಗುಲಾಬಿಯ ಬಳ್ಳಿಯಲ್ಲಿ ನೂರಾರು ಚಿಕ್ಕ ಗುಲಾಬಿಗಳು ಅರಳಿ, ದೊಡ್ಡ ಗುಲಾಬಿಗಳ ಆಗಮನವನ್ನು ಸೂಚಿಸುತ್ತಿದೆ. ಬಿಳಿ ಹಾಗೂ ನೇರಳೆ ಬಣ್ಣದ ದಾಸವಾಳಗಳ ಕಾಲ ಮುಗಿಯುತ್ತ ಬಂದಿತ್ತು. ಗಿರಿಯ ಬಸವನ ಹುಳುಗಳು ಗಿಡ ವನ್ನು ಮುತ್ತಿದ್ದವು. ಹುಲ್ಲಿನ ಬಿಳಿಹೂವುಗಳ ಸಾಲಿನಲ್ಲಿ ನೃತ್ಯೋ ತ್ಸವ ನಡೆಯುತ್ತಿತ್ತು. ಹಳದಿ ಲಿಲ್ಲಿಗಳಂತೂ ಅನೇಕಾನೇಕ. ಜಿನಿಯಾ ಹೂಗಳ ಋತು ಇನ್ನೇನು ಪ್ರಾರಂಭವಾಗುವುದರ ಲ್ಲಿತ್ತು. ದೊಡ್ಡ ದೊಡ್ಡ ಮರಗಳಲ್ಲಿ ಬಿಳಿ ಹಾಗೂ ನಸುಗುಲಾಬಿ ಬಣ್ಣದ ಹೂಗಳು ಗೊಂಚಲು ಗೊಂಚಲಾಗಿ ಬಿಟ್ಟಿದ್ದವು. ಎಲೆ ಗಳೇ ಕಾಣುತ್ತಿರಲಿಲ್ಲ. ದೇವರ ವಿರಾಟ್ ಮಂದಿರದಲ್ಲಿ ಜೋಡಿ ಸಿಟ್ಟ ಹೂದಾನಿಗಳಂತೆ ತೋರುತ್ತಿದ್ದವು. ಆಶ್ರಮದ ಅಂಕು ಡೊಂಕಾದ ರಸ್ತೆಗಳ ಎರಡು ಬದಿಗಳಲ್ಲೂ ಬೇಲಿಯಲ್ಲಿ ನಾನಾ ಆಕೃತಿಯ ಫರ್ನ್‌ಗಳು ಹಸಿರು ಕಾಂತಿಯನ್ನು ಹೊಮ್ಮಿಸುತ್ತಿದ್ದವು. ಕೆಳಗೆ ಇರುವ ತಾಲ್ (ಸರೋವರದ) ನಲ್ಲಿ ನೀರು ಜಗಜಗಿಸು ತ್ತಿತ್ತು. ಕಾಡು ಬಾತುಗಳು ಎಲ್ಲಿಂದಲೋ ಬಂದು ಅಲ್ಲಿ ಕೆಲವು ದಿನಗಳ ತಮ್ಮ ವಾಸ ಹೂಡಿದ್ದವು.

ಸ್ವಾಮಿ ಅಪೂರ್ವಾನಂದರು ಕೈಲಾಸ ದರ್ಶನ ಮಾಡಿ ಕೊಂಡು ಶ್ಯಾಮಲಾತಾಲಿಗೆ ಹಿಂತಿರುಗಿದ್ದಾರೆ. ಇಲ್ಲಿಗೆ ಬರುವ ಮೊದಲು ದೆಹಲಿಯಲ್ಲಿಳಿದು ಅಲ್ಲಿಯ 'ಫಜಲೀ' ಮಾವಿನ ಹಣ್ಣನ್ನು, ವಿವಿಧ ಬಗೆಯ ಸಿಹಿ ತಿನಿಸುಗಳನ್ನು ತಂದಿದ್ದಾರೆ. ವಿರಜಾನಂದರಂತೂ ಬಾಲಕರಂತೆ ಖುಷಿಪಡುತ್ತಿದ್ದಾರೆ. ತಾವೇ ಸ್ವತಃ ಮಾವಿನ ಹಣ್ಣುಗಳನ್ನು ಜೋಪಾನವಾಗಿ ಜೋಡಿಸಿದರು ಮತ್ತು ತಾವೇ ದಿನವೂ ಊಟದ ಸಮಯದಲ್ಲಿ ಅದನ್ನು ಎಲ್ಲ ರಿಗೂ ಹಂಚುತ್ತಿದ್ದರು. ಎಲ್ಲರಿಗೂ ಸಮಭಾಗ. ತಾವೂ ಕೂಡ

ಎಲ್ಲರಲ್ಲಿ ಒಬ್ಬರು! ಅನಂತಾನಂದರು ಹೋದಾಗಿನಿಂದ ಆಶ್ರಮದ ತೋಟ ಮತ್ತು ಗೋಶಾಲೆಯ ಕಡೆಗೆ ಮಹಾರಾಜರೇ ತುಂಬ ಗಮನ ಕೊಡಬೇಕಾಗುತ್ತಿತ್ತು. ಈಗ ಅಪೂರ್ವಾನಂದರ ಬರುವಿಕೆಯಿಂದಾಗಿ ನಿಶ್ಚಿಂತರಾಗಿದ್ದಾರೆ.

ಲೆಕ್ಕಪತ್ರವನ್ನು ಹಿಡಿದು ಈಗಲೂ ವಿರಜಾನಂದರು ಬೆವರು ಸುರಿಸುತ್ತಿದ್ದರು. ಇದನ್ನು ಕಂಡು ಅಪೂರ್ವಾನಂದರು ''ಮಹಾರಾಜ್ ನಿಮ್ಮ ಹೊಸ ಸೇವಕ ಬಂದಿದ್ದಾನಲ್ಲ, ಅವನಿಗೆ ಈ ಪುಸ್ತಕಗಳನ್ನೆಲ್ಲ ಕೊಟ್ಟುಬಿಡಿ, ಅವನು ಲೆಕ್ಕದಲ್ಲಿ ದಕ್ಷ, ನಿಪುಣ, ತಾಳೆ ಹೊಂದಿಸುತ್ತಾನೆ'' ಎಂದರು.

ಹೌದೇನು?

ನಿಜ ಮಹಾರಾಜ್, ಕರೆಯಿರಿ ಅವನನ್ನು.

ಆತ ಬಂದಾಗ ಕೆಲವು ಪ್ರಶ್ನೆಗಳು ಹಾಕಲ್ಪಟ್ಟವು —

ನಿನಗೆ ಜಮಾ-ಖರ್ಚಿನ ಲೆಕ್ಕವಿಡಲು ಬರುವುದೆ?

ಹ್ಞಾ.

ಬರವಣಿಗೆ ಚೊಕ್ಕಟವಾಗಿದೆಯಷ್ಟೆ?

ಹ್ಞಾ.

ಚಿಕ್ಕ ಚಿಕ್ಕದಾಗಿ ಬರೆದು ಕಾಗದ ಉಳಿಸಬಲ್ಲೆಯಾ? ನಾನು ಮಾಡುತ್ತಿರುವಂತೆ?

ಹ್ಞಾ, ಪ್ರಯತ್ನಿಸುವೆ.

ಲೆಕ್ಕಪತ್ರದ ಬಾಬತ್ತನ್ನು ಸೇವಕನಿಗೆ ಒಪ್ಪಿಸಿ ವಿರಜಾನಂದರು ನಿಶ್ಚಿಂತರಾದರು. ಈಗ ಮುಂದಿನ ಪ್ರಯಾಣಕ್ಕೆ ಸಿದ್ಧತೆಗಳಾಗ ತೊಡಗಿದವು. ಮೊದಲು ಮಾಯಾವತಿಗೆ ಭೇಟಿ. ಅಲ್ಲಿಂದ ಆಲ್ಮೋರ, ಮತ್ತಲ್ಲಿಂದ ಮುಂಬೈಗೆ. ಡಿಸೆಂಬರ್ ಹೊತ್ತಿಗೆ ಬೇಲೂರು ಮಠಕ್ಕೆ ಹಿಂತಿರುಗುವ ಯೋಜನೆ.

ವಿರಜಾನಂದರನ್ನು ಈ ಸಲ ಮಾಯಾವತಿಗೆ ಕರೆದೊಯ್ಯಲು ಡೋಲಿ ಹಾಗೂ ಕೂಲಿಗಳು ಬಂದಿದ್ದರು. ೧೯೫೦ರ ಸೆಪ್ಟೆಂಬರ್ ೨ರಂದು ಮಧ್ಯಾಹ್ನದ ಊಟದ ನಂತರ ಒಂದು ಗಂಟೆಗೆ ಮಾಯಾವತಿಗೆ ಹೊರಟರು. ಜೊತೆಗೆ ಅವರ ಸೇವಕರಿಬ್ಬರು. ಮಹಾರಾಜರು ಡೋಲಿಯಲ್ಲಿ ಮಾಯಾವತಿಗೆ ಹೋಗುತ್ತಿರುವುದು ಇದೇ ಮೊದಲು. ಹಿಂದೆಲ್ಲ ನಡೆದೋ, ಕುದುರೆ ಸವಾರಿ ಮಾಡಿಯೋ ಹೋಗುತ್ತಿದ್ದರು. ಈಗ ಅದು ಸಾಧ್ಯವಿಲ್ಲ. ದೇಹ ವಾರ್ಧಕ್ಯಕ್ಕೆ ಕಾಲಿಟ್ಟಿದೆ. ಅಂದಿನ ರಾತ್ರಿ ಡಿವ್ರೀಯ ಪ್ರವಾಸಿ ಮಂದಿರದಲ್ಲಿ ತಂಗಿದ್ದರು. ರಾತ್ರಿ ಮಂಚದಲ್ಲಿ ಮಲಗಿರುತ್ತ ತಮ್ಮ ಸೇವಕರಿಗೆ ಹೇಳುತ್ತಿದ್ದಾರೆ, ''ಮೊದಲೆಲ್ಲ ಒಂದೇ ದಿನದಲ್ಲಿ ನಡೆದು ಮಾಯಾವತಿಗೆ ಹೋಗುತ್ತಿದ್ದೆ. ಈಗ ಡೋಲಿಯಲ್ಲಿ ಕುಳಿತು ಹತ್ತು ಮೈಲಿ ಬಂದಿದ್ದಕ್ಕೂ ಎಷ್ಟೊಂದು ಸುಸ್ತು!''

ಮಾರನೇ ದಿನ ಪ್ರಯಾಣ ಮುಂದುವರಿಸಿದರು. ಆಕಾಶದಲ್ಲಿ ಮೋಡಗಳು ದಟ್ಟೈಸುತ್ತಿದ್ದವು. ಮಳೆಯಾದರಂತೂ ಬಹಳ ಕಷ್ಟ. ಚಂಪಾವತ್‌ಗೆ ಹೋಗಲು ೧೮ ಮೈಲಿಗಳನ್ನು ಸವೆಸಬೇಕು. ಊಹೆಯು ನಿಜವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ೮-೯ ಮೈಲಿಗಳನ್ನು ಕ್ರಮಿಸುವಷ್ಟರಲ್ಲಿ ಭೀಕರಮಳೆ. ವರ್ಷಾತಿ (ರೈನ್ ಕೋಟ್) ಇದ್ದೂ, ಛತ್ರಿ ಹಿಡಿದಿದ್ದರೂ ಸಹ ಚಂಪಾವತ್ ತಲುಪುವಷ್ಟರಲ್ಲಿ ಎಲ್ಲರಿಗೂ ಅರ್ಧ ಸ್ನಾನವಾಗಿತ್ತು! ತಲುಪಿದಾಗ ಮಧ್ಯಾಹ್ನ ೧೨ ಗಂಟೆ. ಅಲ್ಲಿಯ ಪ್ರವಾಸಿ ಮಂದಿರದಲ್ಲಿ ಈ ಮೊದಲೇ ಮಾಯಾವತಿಯ ಅಧ್ಯಕ್ಷರಾದ ಪವಿತ್ರಾನಂದರು, 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾದ ತೇಜಸಾನಂದರು ಮತ್ತು ಇನ್ನಿಬ್ಬರು ಸಾಧುಗಳು ಮಹಾರಾಜರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದರು. ಅಲ್ಲಿ ಆಹಾರ ಸೇವಿಸಿ, ಸ್ವಲ್ಪ ವಿಶ್ರಾಂತಿ ಪಡೆದು ಮರುಪ್ರಯಾಣ ಬೆಳೆಸಲಾಯಿತು. ಐದು ಮೈಲಿಗಳ ರಸ್ತೆ ಕ್ರಮಿಸಿ ಮಾಯಾವತಿ ತಲುಪುವಷ್ಟರಲ್ಲಿ ಸಂಜೆಯಾಗಿತ್ತು.

ಮದರ್ ಸೇವಿಯರ್‍ಸ್ ಬಂಗ್ಲೆಯಲ್ಲಿ ತಂಗುವ ತಮ್ಮ ಇಚ್ಛೆಯನ್ನು ವಿರಜಾನಂದರು ಪ್ರಕಾಶಪಡಿಸಿದ್ದರು. ಈ ಬಂಗ್ಲೆಯನ್ನು ಅನೇಕ ದಿನಗಳಿಂದ ಯಾರೂ ಉಪಯೋಗಿಸಿರಲಿಲ್ಲ. ಅದರ ಕೋಣೆಯೊಂದರಲ್ಲಿ ಕಟ್ಟಿಗೆಗಳನ್ನು ಸಂಗ್ರಹಿಸಲಾಗಿತ್ತು. ಮಹಾರಾಜರು ಬರುವರೆಂದು ಆಶ್ರಮದ ಸಾಧು-ಬ್ರಹ್ಮಚಾರಿಗಳು ಸೇರಿ, ಕೂಲಿಗಳ ಸಹಾಯಪಡೆದು ಅನೇಕ ದಿನಗಳ ಪರಿಶ್ರಮದಿಂದ ಆ ಕಟ್ಟಿಗೆಗಳನ್ನೆಲ್ಲ ಬೇರೆಡೆಗೆ ಸಾಗಿಸಿ ಕಟ್ಟಡಕ್ಕೆ ಸುಣ್ಣ-ಬಣ್ಣ ಮಾಡಿಸಿ ಚೊಕ್ಕಟವಾಗಿಟ್ಟಿದ್ದರು. ವಿರಜಾನಂದರಿಗೆ ಅದನ್ನು ನೋಡಿ ಬಹಳ ಸಂತೋಷವಾಯಿತು. ಬೆಳಗ್ಗೆ ಮತ್ತು ಸ್ನಾನಾನಂತರ ಕೆಲವು ಗಂಟೆಗಳ ದೀರ್ಘ ಧ್ಯಾನ ಮಾಡುತ್ತಿದ್ದರು. ಸಂಜೆ ಮುಂದೆಯೇ ಇದ್ದ 'ಮದರ್‍ಸ್ ವಾಕ್' ಎಂದು ಹೆಸರಾದ ರಸ್ತೆಯಲ್ಲಿ ತಾವೊಬ್ಬರೇ ಅಡ್ಡಾಡುತ್ತಿದ್ದರು. ಆ ಸಮಯದಲ್ಲಿ ಅವರು ಗಂಭೀರರಾಗಿದ್ದಂತೆ ತೋರುತ್ತಿತ್ತು. ಬಹುಶಃ ಹಿಂದಿನ ದಿನಗಳ ನೆನಪು ಅವರ ಮನವನ್ನು ಮುತ್ತಿ ಉದಾಸರನ್ನಾಗಿ ಮಾಡುತ್ತಿತ್ತೇನೋ. ಸೆಪ್ಟೆಂಬರ್ ಮಧ್ಯಭಾಗ ಕಳೆದಿದ್ದರೂ ಈ ವರ್ಷ ಮಳೆ ಪೂರ್ತಿ ನಿಂತಿರಲಿಲ್ಲ. ಆಕಾಶದಲ್ಲಿ ಸಾಧಾರಣವಾಗಿ ಮೋಡ ಮುಸುಕಿರುತ್ತಿತ್ತು. ಮಾಯಾವತಿಯ ವಿಶೇಷಗಳಲ್ಲೊಂದಾದ ತುಷಾರಾವೃತ ಪರ್ವತ ಶೃಂಗಗಳ ದೃಶ್ಯವು ಈಗ ಸ್ಪಷ್ಟವಾಗಿ ಗೋಚರಿಸುತ್ತಿರಲಿಲ್ಲ. ಇದರಿಂದ ವಿರಜಾನಂದರು ಸ್ವಲ್ಪ ನಿರಾಶೆಗೊಂಡಿದ್ದರು. ಸ್ವಾಮಿ ವೀರೇಶ್ವರಾನಂದರು ಬೇಲೂರು ಮಠದಿಂದ ಮಹಾರಾಜರಿಗೆ ಪತ್ರ ಬರೆದು ''ನೀವು ಸೆಪ್ಟೆಂಬರ್‌ನಲ್ಲಿ ಹೋಗಿ ತಪ್ಪು ಮಾಡಿದಿರಿ. ಅಕ್ಟೋಬರಿನಲ್ಲಿ ಹೋಗಿದ್ದರೆ ಚೆನ್ನಾಗಿರುತ್ತಿತ್ತು'' ಎಂದಿದ್ದರು. ಆದರೇನು ಮಾಡುವುದು? ವಿರಜಾನಂದರಿಗೆ ಬೇರೆ ದಾರಿಯೇ ಇರಲಿಲ್ಲ, ಏಕೆಂದರೆ ಅವರು ಭೇಟಿನೀಡುವ ಸ್ಥಳಗಳ ಪಟ್ಟಿ ಈಗಾಗಲೇ ತಯಾರಾಗಿತ್ತಲ್ಲ!

ಕೃಷ್ಣಜನ್ಮಾಷ್ಟಮಿಯಂದು ವಿರಜಾನಂದರ ಕೊಠಡಿಯಲ್ಲಿ ಆಶ್ರಮವಾಸಿಗಳೆಲ್ಲ ಸೇರಿ ಶ್ರೀಮದ್ಭಾಗವತ ಪಠಣ ಮಾಡಿ, ಭಜನೆಗಳನ್ನು ಹಾಡಿದರು. ಎಲ್ಲವೂ ಮುಗಿದ ಮೇಲೆ ವಿರಜಾನಂದರು ಎದ್ದು, ಎಲ್ಲಿಂದಲೋ ಒಂದು ಸುಂದರವಾದ ಶೀಷೆಯನ್ನು ತಂದರು. ಅದರಲ್ಲಿ ಬಣ್ಣ ಬಣ್ಣದ ಕಾಗದದಲ್ಲಿ ಸುತ್ತಿದ್ದ ಲಾಜೆನ್ಸ್‌ಗಳು! ಎಲ್ಲರ ಕೈಗೂ ಒಂದೊಂದನ್ನು ಕೊಟ್ಟು ನಗುತ್ತ ಹೇಳುತ್ತಿದ್ದಾರೆ, 'ಬಾಯನ್ನು ಸಿಹಿ ಮಾಡಿಕೊಳ್ಳಿ'.

'ಇದನ್ನೆಲ್ಲಿಂದ ಹೊರತೆಗೆದಿರಿ ಮಹಾರಾಜ್?'

'(ನಗುತ್ತ) ನಾನು ಸ್ವಾಮೀಜಿ ಚೇಲಾ (ಶಿಷ್ಯ). ನನ್ನ ಹತ್ತಿರ ಎಲ್ಲ ಇರುತ್ತದೆ.'

ಕೊಟ್ಟ ವಸ್ತು ಸಾಮಾನ್ಯವಾದದ್ದೇ ಆದರೂ ಎಲ್ಲರ ಹೃದಯ ತುಂಬಿಬಂತು.

''ಸೆಪ್ಟೆಂಬರ್ ೮ರಂದು (೧೯೩೯) ಬೆಳಗ್ಗೆ ಕೊಲ್ಕತ್ತೆಯಲ್ಲಿ ಸ್ವಾಮಿ ಅಭೇದಾನಂದರು ತಮ್ಮ ದೇಹತ್ಯಾಗ ಮಾಡಿದ್ದಾರೆ'' ಎಂಬ ಶೋಕವಾರ್ತೆ ತಂತಿಯ ಮೂಲಕ ವಿರಜಾನಂದರಿಗೆ ತಲುಪಿತು. ಇಡೀ ದಿನ ಮಹಾರಾಜರು ವಿಷಣ್ಣರಾಗಿದ್ದರು. ಸಂಜೆ ಎಲ್ಲರೊಡನೆ ಕುಳಿತು ಅಭೇದಾನಂದರ ಅನೇಕ ಘಟನೆಗಳನ್ನು ಹೇಳಿದರು. ಮಾರನೇ ದಿನ ಅಭೇದಾನಂದರ ಶಿಷ್ಯರಿಗೆ ಮತ್ತು ಭಕ್ತರಿಗೆ ತಂತಿಯನ್ನು ಕಳುಹಿಸಿ, ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು. ಅಭೇದಾನಂದರು ಸ್ಥಾಪಿಸಿದ್ದ ಶ್ರೀರಾಮಕೃಷ್ಣ ವೇದಾಂತ ಸಮಿತಿಯ ಸಂನ್ಯಾಸಿಗಳೊಬ್ಬರಿಗೆ ವೈಯಕ್ತಿಕ ಪತ್ರವೊಂದನ್ನು ಬರೆದರು.

ಎರಡು ದಿನ ಸಂಜೆಯ ವೇಳೆಯಲ್ಲಿ ನೆರೆದಿದ್ದ ಆಶ್ರಮವಾಸಿಗಳೊಡನೆ ವರಾಹನಗರದ ಮಠ ಮತ್ತು ಸ್ವಾಮೀಜಿಯವರ ನೆನಪುಗಳನ್ನು ಹಂಚಿಕೊಂಡರು. ದ್ವಿತೀಯ ಮಹಾಯುದ್ಧವು ಆರಂಭವಾಗಿರುವುದನ್ನು ಮಾಯಾವತಿಯಲ್ಲಿದ್ದಾಗಲೇ ತಿಳಿದರು. ಇಷ್ಟು ದಿನಗಳು ಜರ್ಮನಿ ಮತ್ತು ಆಂಗ್ಲೋ ಫ್ರೆಂಚರ ಮಧ್ಯೆ ವಾಗ್ಯುದ್ಧವು ನಡೆಯುತ್ತಿತ್ತು. ಈಗದು ವಾಸ್ತವ ರೂಪ ತಳೆದಿದೆ. ಹಿಟ್ಲರ್ ಫ್ರಾನ್ಸ್ ಮೇಲೆ ಆಕ್ರಮಣ ನಡೆಸಿದ್ದಾಗಲೇ ಇಂಗ್ಲೆಂಡಿನ ಸೈನ್ಯ ಫ್ರಾನ್ಸ್‌ನಲ್ಲಿ ಹಾಜರಾಗಿದೆ.

ಮಾಯಾವತಿಯಿಂದ ಸೀದಾ ಡೋಲಿಯಲ್ಲೇ ಕುಳಿತು ಆಲ್ಮೋರಕ್ಕೆ ಹೋಗುವುದೆಂದು ವಿರಜಾನಂದರು ನಿಶ್ಚಯಿಸಿದ್ದರು. ಈಗ ತಿಳಿದುಬಂದದ್ದೇನೆಂದರೆ, ಈ ಹಾದಿಯು ಕಷ್ಟಕರ ಹಾಗೂ ಹೆಚ್ಚು ಸಮಯವೂ ಹಿಡಿಯುತ್ತದೆ ಎಂದು. ಇದನ್ನೇ ಬೋಶಿ ಬಾಬುಗಳೂ ಸಹ ಬರೆದಿದ್ದರು. ಆದ್ದರಿಂದ ಮಾಯಾವತಿಯಿಂದ ಶ್ಯಾಮಲಾತಾಲ್‌ಗೆ ಇಳಿದುಹೋಗಿ, ಟನಕಪುರದಿಂದ ಕಾಠಗೋದಾಮಿಗೆ ರೈಲಿನಲ್ಲಿ ಪ್ರಯಾಣಿಸಿ, ಅಲ್ಲಿಂದ ಮೋಟಾರಿನಲ್ಲಿ ಆಲ್ಮೋರಕ್ಕೆ ಹೋಗುವುದೆಂದು ತೀರ್ಮಾನಿಸಿದರು.

ಮಾಯಾವತಿಯಿಂದ ಎರಡು ಮೈಲಿ ದೂರದಲ್ಲಿ 'ಸೂಂಯಿ' ಗ್ರಾಮ. ಅಲ್ಲಿಯ ಗೋಪಿಯಾ ಮೇಸ್ತ್ರಿಗೆ ಮಾಯಾವತಿಯ ಆಶ್ರಮದೊಂದಿಗೆ ಬಹುಕಾಲದ ನಿಕಟ ಸಂಪರ್ಕ. ಅಲ್ಲಿಯ ಬಹುತೇಕ ಕಟ್ಟಡಗಳು ಅವನಿಂದಲೇ ನಿರ್ಮಿತವಾದವುಗಳು. ಶ್ಯಾಮಲಾತಾಲ್‌ನ ಆಶ್ರಮ ನಿರ್ಮಾಣದ ಕಾರ್ಯದಲ್ಲೂ ಗೋಪಿಯಾನೇ ಮುಖ್ಯ ಕೆಲಸಗಾರ. ಒಂದು ದಿನ ಆತ ಬಂದು ವಿರಜಾನಂದರ ಹತ್ತಿರ ಬಿನ್ನವಿಸಿದ, ''ನಾನೀಗ ಮುದುಕನಾಗಿ ಬಿಟ್ಟಿದ್ದೇನೆ. ಪರಕಾಲಕ್ಕಾಗಿ ಏನನ್ನಾದರೂ ಗಳಿಸಬೇಕು. ನೀವಂತೂ ಈಗ ಗುರುಮಹಾರಾಜ್; ಎಷ್ಟೊಂದು ಜನರಿಗೆ ಕೃಪೆ ಮಾಡಿದ್ದೀರಿ! ನಾನೊಬ್ಬ ಮೂರ್ಖ ದರಿದ್ರ ಮೇಸ್ತ್ರಿ, ನನ್ನಲ್ಲೂ ದಯೆ ತೋರಿ'' ಎಂದು. ಮಹಾರಾಜರು ಆತನ ವ್ಯಾಕುಲತೆ ಕಂಡು ಸುಪ್ರೀತರಾಗಿ, ಮಂತ್ರದೀಕ್ಷೆಯನ್ನಿತ್ತರು; ಆತನೊಂದಿಗೆ ಆಶ್ರಮದ ಬ್ರಹ್ಮಚಾರಿಗಳೊಬ್ಬರಿಗೂ ಸಹ ದೀಕ್ಷೆಯಾಯಿತು.

ಮಾಯಾವತಿಯ ಎತ್ತರವು ಶ್ಯಾಮಲಾತಾಲ್‌ಗಿಂತ ೨೦೦೦ ಅಡಿ ಹೆಚ್ಚು. ಇದರಿಂದಾಗಿ ವಿರಜಾನಂದರು ಕೆಲವು ದಿನಗಳಿಂದ ಉಸಿರಾಟದ ತೊಂದರೆಗೊಳಗಾದರು. ಮಾಯಾವತಿಯಲ್ಲಿ ಕಡೆಯ ಪಕ್ಷ ಒಂದು ತಿಂಗಳಾದರೂ ಇರಬೇಕೆಂದು ಸಂಕಲ್ಪಿಸಿದ್ದರು. ಆದರೆ ಉಸಿರಾಟದ ತೊಂದರೆಯು ಹೆಚ್ಚಾದರೆ ಅಲ್ಲಿಯ ಆಶ್ರಮವಾಸಿಗಳಿಗೆ ತೊಂದರೆಯಾಗುವುದೆಂದು ಭಾವಿಸಿ ಸೆಪ್ಟೆಂಬರ್ ೨೬ರಂದು ಎಲ್ಲರಿಂದ ಬೀಳ್ಕೊಂಡು ಶ್ಯಾಮಲಾತಾಲ್‌ಗೆ ಹೊರಟರು. ಈ ಬಾರಿ ಮಾಯಾವತಿಯಲ್ಲಿ ಅವರು ೨೪ ದಿನ ಗಳಿದ್ದರು. ಇದೇ ಅವರ ಕೊನೆಯ ಭೇಟಿಯಾಯಿತು.

ಅಮೇರಿಕಾ ಸಂಯುಕ್ತ ಸಂಸ್ಥಾನದ ಸ್ಯಾನ್‌ಫ್ರಾನ್ಸಿಸ್ಕೋ ವೇದಾಂತ ಸೊಸೈಟಿಯ ಹೊಸ ಶಾಖೆಯೊಂದು ವಿದ್ಯಾಲಯಗಳ ನಗರವಾದ ಬರ್ಕಲಿ ನಗರದಲ್ಲಿ ಪ್ರಾರಂಭವಾಗಲಿತ್ತು. ಸೊಸೈಟಿಯ ಕಾರ್ಯದರ್ಶಿಗಳಾದ ಸ್ವಾಮಿ ಅಶೋಕಾನಂದರು ಇದಕ್ಕಾಗಿ ಮಠಾಧ್ಯಕ್ಷರಿಂದ ಸಂದೇಶವೊಂದನ್ನು ಬಯಸಿದ್ದರು. ವಿರಜಾನಂದರು, ಶ್ಯಾಮಲಾತಾಲ್‌ನಿಂದ 'ಈಗಾಗಲೇ ಪ್ರಾರಂಭವಾಗಿರುವ ಈ ಕೆಲಸವು ವೃದ್ಧಿಹೊಂದಿ, ಎಲ್ಲೆಡೆ ಪ್ರಸಾರಗೊಳ್ಳಲಿ' ಎಂದು ಹಾರೈಸಿ, ತಮ್ಮ ಶುಭೇಚ್ಛೆಗಳನ್ನು ಕಳುಹಿಸಿದರು. ದುರ್ಗಾಪೂಜೆ ಬಂದೇ ಬಿಟ್ಟಿತು. ಮಹಾರಾಜರು ಮೂರು ದಿನಗಳೂ ಚಂಡೀ ಪಠಣವನ್ನು ಮಾಡಿದರು. ದಶಮಿಯ ದಿನ ಆಶ್ರಮವಾಸಿಗಳೆಲ್ಲ ಸೇರಿ ಒಕ್ಕೊರಲಿನಿಂದ ದೇವೀಸಂಕೀರ್ತನೆಯನ್ನು ಮಾಡಿದರು. ಕೆಲವು ದಿನಗಳ ನಂತರ ಮತ್ತೆ ಮುಂದಿನ ಯಾತ್ರೆಗೆ ಸಿದ್ಧತೆಗಳಾಗತೊಡಗಿದವು. ಇಷ್ಟರಲ್ಲಿ ಕಂಖಲ್ ಸೇವಾಶ್ರಮ ಮತ್ತು ದೆಹಲಿ ಶಾಖಾ ಕೇಂದ್ರಗಳಿಂದಲೂ ಕರೆಗಳು ಬರಲಾರಂಭಿಸಿದವು. ವಿರಜಾನಂದರು ತಮ್ಮ ಯಾತ್ರಾಪಟ್ಟಿಯಲ್ಲಿ ಈ ಎರಡೂ ಸ್ಥಳಗಳನ್ನು ಸೇರಿಸಲು ಸಮ್ಮತಿಸಿದರು.

*(ಮುಂದುವರಿಯುವುದು)*